JUNE 06, 2025

# AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಗ್ರಾಮೀಣ ಅರಿವು ಕೇಂದ್ರಗಳ ಡಿಜಿಟಲೀಕರಣ; ಸ್ಪರ್ಧಾತ್ಮಕ ಪರೀಕ್ಷೆ ಆಕಾಂಕ್ಷಿಗಳಿಗೆ, ಆಸರೆ.**
- **ಉತ್ತರಕನ್ನಡದ ಗುಡ್ಡ ಕುಸಿತದ ಜಾಗೆಗಳಲ್ಲಿ, ಕಟ್ಟೆಚ್ಚರ ವಹಿಸಲು, ಭಾರತೀಯ ಭೂ ಗರ್ಭ ಸರ್ವೇಕ್ಷಣಾ ಸಂಸ್ಥೆ, ಸೂಚನೆ.**
- **"ಏಕ್ ಪೇಢ್ ಮಾ ಕೆ ನಾಮ್"; ವಿಶ್ವ ಪರಿಸರ ದಿನಾಚರಣೆಯಂದು, ಹಲವೆಡೆ ವೃಕ್ಷಾರೋಪಣ.**
- **ಕೇಂದ್ರ ಸರ್ಕಾರಕ್ಕೆ 11 ವರ್ಷ ಪೂರ್ಣ; ಹಲವು ಕ್ಷೇತ್ರಗಳಲ್ಲಿ ಗಣನೀಯ ಪರಿವರ್ತನೆಗಳನ್ನು ಸಾಧಿಸುವಲ್ಲಿ, ಯಶಸ್ವಿ.**

<><><>

**ಈಗ ವಾರ್ತೆಗಳ ವಿವರ**

<><><>

**ರಾಯಲ್ ಚಾಲೇಂಜರ್ಸ್ ಬೆಂಗಳೂರು, ಕ್ರಿಕೆಟ್ ತಂಡದ, ಐ.ಪಿ.ಎಲ್. ವಿಜಯೋತ್ಸವ ನಿಮಿತ್ತ ಆಯೋಜಿಸಿದ್ದ, ಅಭಿನಂದನಾ ಸಮಾರಂಭದಲ್ಲಿ ನಡೆದ, ದುರ್ಘಟನೆಗೆ ಸಂಬಂಧಿಸಿ, ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಮೈಕೆಲ್ ಕುನ್ಹಾ ನೇತೃತ್ವದ ಏಕ ಸದಸ್ಯ ಸಮಿತಿ ರಚಿಸಿ, ತನಿಖೆ ನಡೆಸಲಾಗುವುದು ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಬೆಂಗಳೂರಿನಲ್ಲಿ ನಡೆದ ಸಚಿವ ಸಂಪುಟ ಸಭೆಯ ಬಳಿಕ, ಸುದ್ದಿಗೋಷ್ಠಿ ನಡೆಸಿ, ಮಾಹಿತಿ ನೀಡಿದರು.**

<><><>

**ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ, ಹೈಕೋರ್ಟ್‌ನ ಹಂಗಾಮಿ ಮುಖ್ಯ ನ್ಯಾಯಮೂರ್ತಿಗಳಿಗೆ ಪತ್ರ ಬರೆದಿದ್ದು, ದುರ್ಘಟನೆ ಕುರಿತು, ನ್ಯಾಯಾಂಗ ತನಿಖೆ ನಡೆಸುವಂತೆ ಒತ್ತಾಯಿಸಿದ್ದಾರೆ. ಬೌರಿಂಗ್ ಆಸ್ಪತ್ರೆಗೆ ಭೇಟಿ ನೀಡಿ, ಗಾಯಾಳುಗಳ ಆರೋಗ್ಯವನ್ನು ಅವರು ವಿಚಾರಿಸಿದರು.**

<><><>

ಡಿಜಿಟಲ್ ಪರಿಕರ, ಹೊಸ ಪುಸ್ತಕ ನೀಡುವ ಮೂಲಕ, ಮೇಲ್ದರ್ಜೆಗೆ ಏರಿಸಿದ, ಗ್ರಾಮೀಣ ಅರಿವು ಕೇಂದ್ರಗಳ ಸಹಾಯದಿಂದ ಹಲವು ಜನ ಉದ್ಯೋಗ ಪಡೆದಿದ್ದಾರೆ, ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ಸು ಗಳಿಸಿದ್ದಾರೆ ಎಂದು, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ ಪ್ರಿಯಾಂಕ್ ಖರ್ಗೆ ಎಕ್ಸ್ ಮಾಧ್ಯಮದಲ್ಲಿ ತಿಳಿಸಿದ್ದಾರೆ.

<><><>

ಉಡುಪಿ ಜಿಲ್ಲೆ, ಬ್ರಹ್ಮಾವರ ತಾಲೂಕಿನ, ಹಾವಂಜೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ, ವಿದ್ಯಾರ್ಥಿನಿ ವಿನಿಶಾ ಡಿಸೋಜ, ಅರಿವು ಕೇಂದ್ರದಲ್ಲಿ ಅಧ್ಯಯನ ಮಾಡಿ, KCET ಪರೀಕ್ಷೆಯಲ್ಲಿ, ಉತ್ತಮ ರ್‍ಯಾಂಕ್ ಪಡೆದಿದ್ದು, ಸಚಿವ ಪ್ರಿಯಾಂಕ್ ಖರ್ಗೆ ಅಭಿನಂದಿಸಿದ್ದಾರೆ.

<><><>

ವಿನಿಶಾ ಡಿಸೋಜ ಧ್ವನಿ 30 ಸೆಕೆಂದುಗಳು

<><><>

ಗುಡ್ಡ ಕುಸಿತದ ಸಂಭವನೀಯ ಪ್ರದೇಶಗಳ, ಸಣ್ಣ ಬದಲಾವಣೆಗಳನ್ನು ಸೂಕ್ಷ್ಮವಾಗಿ ಗಮನಿಸಿ, ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ, ಭಾರತೀಯ ಭೂ ಗರ್ಭ ಸರ್ವೇಕ್ಷಣಾ ಸಂಸ್ಥೆಯ, ತಾಂತ್ರಿಕ ಅಧಿಕಾರಿ ಮಧುಸೂದನ್ ಸೂಚಿಸಿದ್ದಾರೆ. ಉತ್ತರಕನ್ನಡ ಜಿಲ್ಲೆಯಲ್ಲಿ, ಈಗಾಗಲೇ ಗುರುತಿಸಲಾದ, ಭೂ ಕುಸಿತ ಪ್ರದೇಶಗಳ ಮೇಲ್ವಿಚಾರಣೆಗೆ ನೇಮಿಸಲಾಗಿರುವ, ಸ್ಟಾರ್ಟರ್ಸ್‌ಗಳಿಗೆ, ಆನ್‌ಲೈನ್ ತರಬೇತಿ ಕಾರ್ಯಗಾರ ನಡೆಸಿ, ಮಾತನಾಡಿದರು. ಭೂ ಕುಸಿತಕ್ಕೆ ಅಧಿಕ ಮಳೆ ಪ್ರಮುಖ ಕಾರಣ. ಎತ್ತರ ಪ್ರದೇಶಗಳಲ್ಲಿ ನೀರು ಸರಾಗವಾಗಿ ಹರಿದು ಹೋಗಲು, ಜಾಗವಿಲ್ಲದೆ ನೀರು ಅಲ್ಲಿಯೇ ಸಂಗ್ರಹವಾಗುವುದು, ಮಣ್ಣಿನ ಸವಕಳಿ ಹಾಗೂ ಅವೈಜ್ಞಾನಿಕ ನಿರ್ಮಿತಿಗಳು, ಪಶ್ಚಿಮಘಟ್ಟದಲ್ಲಿ, ಭೂ ಕುಸಿತ ಹೆಚ್ಚಾಗಿ ಸಂಭವಿಸಲು ಕಾರಣ ಎಂದರು.

<><><>

ವಿಶ್ವ ಪರಿಸರ ದಿನಾಚರಣೆ ಹಿನ್ನೆಲೆ, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ರಾಜಭವನದ ಆವರಣದಲ್ಲಿ, ಬಿಲ್ವ ಪತ್ರೆಯ ಸಸಿ ನೆಟ್ಟು, 'ಪ್ರಕೃತಿಯನ್ನು ಪೋಷಿಸಿ, ಪರಿಸರ ಸಂರಕ್ಷಣೆಗೆ, ನಮ್ಮ ಕೊಡುಗೆ ನೀಡೋಣ' ಎಂದು, ಮನವಿ ಮಾಡಿದರು.

<><><>

ಕೇಂದ್ರ ಶಿಕ್ಷಣ ಸಚಿವಾಲಯದ, ರಾಷ್ಟ್ರೀಯ ಯೋಜನೆ, "ಏಕ್ ಪೇಢ್ ಮಾ ಕೆ ನಾಮ್" ಭಾಗವಾಗಿ, ಕಲಬುರಗಿಯ ಶಹಾಬಜಾರ್ ಸಾರ್ವಜನಿಕ ಉದ್ಯಾನವನದಲ್ಲಿ, ಅಮೃತ್ ಮಿತ್ರ ಅಭಿಯಾನಕ್ಕೆ, ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಚಾಲನೆ ನೀಡಿದರು.

<><><>

ಬೀದರ್ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ, ಪರಿಸರ ದಿನಾಚರಣೆಗೆ, ಜಿಲ್ಲಾ ನ್ಯಾಯಾಧೀಶ ಪ್ರಕಾಶ ಬನ್ಸೋಡೆ, ಸಸಿ ನೆಟ್ಟು ಚಾಲನೆ ನೀಡಿದರು.

<><><>

ಅರಣ್ಯ ಇಲಾಖೆ ವತಿಯಿಂದ, ಧಾರವಾಡ ಜಿಲ್ಲೆಯಾದ್ಯಂತ, 129 ಕಿಲೋ ಮೀಟರ್ ಉದ್ದ, 42 ಸಾವಿರದ 886 ಸಸಿಗಳನ್ನು ನೆಡಲಾಗಿದ್ದು, 1 ಲಕ್ಷ 18 ಸಾವಿರ ಸಸಿಗಳನ್ನು, ಸಾರ್ವಜನಿಕರಿಗೆ ವಿತರಿಸಲಾಗಿದೆ ಎಂದು, ಜಿಲ್ಲಾಧಿಕಾರಿ ದಿವ್ಯಾ ಪ್ರಭು ತಿಳಿಸಿದ್ದಾರೆ.

<><><>

ಧಾರವಾಡ ಜಿಲ್ಲೆಯಲ್ಲಿ, ಅರಣ್ಯ ಇಲಾಖೆ, ಸಾಮಾಜಿಕ ಅರಣ್ಯೀಕರಣ ವಿಭಾಗದಿಂದ,75 ಕಿಲೋ ಮೀಟರ್ ಉದ್ದ, 'ನಮ್ಮ ಹೊಲ ನಮ್ಮ ದಾರಿ' ಯೋಜನೆ ಅಡಿ, ರೈತರಿಗೆ ಬೇಕಾದ ಗಿಡಗಳನ್ನು ಇಕ್ಕೆಲಗಳಲ್ಲಿ ನೆಟ್ಟು, ಗಿಡದ ಒಡೆತನ, ಟ್ರೀ ಪಟ್ಟಾ ನೀಡಿ, ಮಾದರಿಯಾಗಿದೆ ಎಂದು, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವಿ.ಎಚ್. ಪರಿಮಳಾ, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ವಿ.ಎಚ್.ಪರಿಮಳಾ ಧ್ವನಿ 35 ಸೆಕೆಂದುಗಳು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **X** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ಸೇವೆ, ಸುಶಾಸನ ಮತ್ತು ಬಡವರ ಕಲ್ಯಾಣದ ತತ್ವಗಳ ಆಧಾರದ ಮೇಲೆ, ಭಾರತಸುದೃಢ ಹೆಜ್ಜೆಗಳನ್ನು ಇರಿಸಿ, ಕಳೆದ ಒಂದು ದಶಕದಲ್ಲಿ, ಹಲವು ಕ್ಷೇತ್ರಗಳಲ್ಲಿ ಗಣನೀಯ ಪರಿವರ್ತನೆಗಳನ್ನು ಸಾಧಿಸುವಲ್ಲಿ, ಯಶಸ್ವಿಯಾಗಿದೆ. ಕಳೆದ 11 ವರ್ಷಗಳಲ್ಲಿ, ಕೇಂದ್ರ ಸರ್ಕಾರ, ಪ್ರಮುಖ ಕ್ಷೇತ್ರಗಳಲ್ಲಿ ಸಾಧಿಸಿದ ವಿಶಿಷ್ಟ ಮೈಲುಗಲ್ಲುಗಳ ಕುರಿತು, ಆಕಾಶವಾಣಿಯ ಪ್ರಾದೇಶಿಕ ಸುದ್ದಿ ವಿಭಾಗ, ವಿಶೇಷ ಮಾಹಿತಿಯನ್ನು ನೀಡುತ್ತಿದೆ. ಭಾರತದ ಹೆಮ್ಮೆಯ ನಾಗರಿಕತೆಯನ್ನು ಪುನರುಜ್ಜೀವಿತಗೊಳಿಸಬಲ್ಲ, ನಮ್ಮ ಶ್ರೀಮಂತ ಸಾಂಸ್ಕೃತಿಕ ಪರಂಪರೆಗಳ, ಸಂರಕ್ಷಣೆಯ ವೈಶಿಷ್ಟ್ಯದ ಮೇಲೆ, ಇಂದಿನ ಈ ವರದಿ, ಕೇಂದ್ರೀಕೃತವಾಗಿದೆ.

<><><>

*ಕಳೆದ ದಶಕದಲ್ಲಿ, ಭಾರತದ ಸಾಂಸ್ಕೃತಿಕ ಪಯಣ, ಮೌಲ್ಯಯುತವಾಗಿದೆ. ಪ್ರವರ್ಧಮಾನಕ್ಕೂ ಬಂದಿದೆ. ಸಂಪ್ರದಾಯದಲ್ಲಿ ಬೇರೂರಿದ್ದರೂ, ವರ್ಣರಂಜಿತವಾಗಿ, ಇಡೀ ವಿಶ್ವಕ್ಕೆ ಇಂದು ಮುಕ್ತವಾಗಿದೆ.*

*ವಿಶ್ವ ವಿಖ್ಯಾತ, ಹಂಪಿಯ, ಕಾಲಾತೀತ ವಾಸ್ತುಶಿಲ್ಪ ದೇಗುಲಗಳಿಂದ ಹಿಡಿದು, ಶಾಸ್ತ್ರೀಯ ಸಂಗೀತ ಹಾಗೂ ನೃತ್ಯದಂತಹ, ಜೀವಂತ ಸಂಪ್ರದಾಯಗಳ ವರೆಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ಅಮೂರ್ತ ಪರಂಪರೆಗೆ, ಹೊಸ ಚೈತನ್ಯ ನೀಡಿದೆ.*

*ಅಯೋಧ್ಯೆಯ ಶ್ರೀರಾಮ ಮಂದಿರ, ನಂಬಿಕೆ ಮತ್ತು ರಾಷ್ಟ್ರೀಯ ಏಕತೆಯ ಸಂಕೇತವಾಗಿದ್ದರೆ, ವಾರಾಣಸಿಯ ಕಾಶಿ ವಿಶ್ವನಾಥ ಧಾಮ್ ಕಾರಿಡಾರ್ ಯೋಜನೆ, ಗಂಗಾ ನದಿಯೊಂದಿಗೆ ನೇರವಾಗಿ ಸಂಪರ್ಕಿಸುವಂತಾಗಿ, ಶ್ರದ್ಧಾಳುಗಳ ಆಧ್ಯಾತ್ಮಿಕ ಅನುಭೂತಿಗೆ ಕಾರಣವಾಗಿದೆ.*

*ಉಜ್ಜಯಿನಿ,ಯ ಮಹಾಕಾಲ ಲೋಕ ಯೋಜನೆ, ಹಿಮಾಲಯದ ತಪ್ಪಲಿನ ಕೇದಾರನಾಥ ಮತ್ತು ಬದರಿನಾಥ ಧಾಮದ, ಪುನರಾಭಿವೃದ್ಧಿ ಹಾಗೂ ಸುರಕ್ಷತೆ ಯೋಜನೆಗಳು, ಮನನೀಯ.*

*ಸ್ವದೇಶ ದರ್ಶನ ಯೋಜನೆ, ಪ್ರಯಾಣದ ಮೂಲ ಸೌಕರ್ಯಗಳ ಗುಣಮಟ್ಟ ಹೆಚ್ಚಿಸಿದ್ದು, ಒಟ್ಟು 76 ಯೋಜನೆಗಳಿಗೆ, ಐದು ಸಾವಿರ ಕೋಟಿ ರೂಪಾಯಿಗಿಂತ ಹೆಚ್ಚು, ಮಂಜೂರಾತಿ ಕೇಂದ್ರ ಸರ್ಕಾರ ನೀಡಿದೆ.*

*ಸಾಂಪ್ರದಾಯಿಕ ನಗರಗಳ ಅಭಿವೃದ್ಧಿ ಮತ್ತು ಸಂವರ್ಧನೆ ಯೋಜನೆ ಅಡಿ, ದೇಶದ 12 ಪಾರಂಪರಿಕ ನಗರಗಳನ್ನು ಹಾಗೂ ಸಿಖ್ಖ್ ಗುರುದ್ವಾರಾಗಳು, ಬೌದ್ಧ ವಿಹಾರಗಳು, ಜೈನ ದೇವಾಲಯಗಳು, ಸೂಫಿ ದರ್ಗಾಗಳು ಮತ್ತು ಬುಡಕಟ್ಟು ಸಮುದಾಯಗಳ, ಪವಿತ್ರ ಶ್ರದ್ಧಾ ಸ್ಥಳಗಳನ್ನು ಪುನರ್ ಸ್ಥಾಪಿಸಲು ಆದ್ಯತೆ ನೀಡಲಾಗಿದೆ.*

*ಭಾರತ, ವಿದೇಶಗಳಿಂದ 350ಕ್ಕೂ ಹೆಚ್ಚು ವಿಗ್ರಹಗಳು ಹಾಗೂ ಕಲಾಕೃತಿಗಳನ್ನು ಸ್ವದೇಶಕ್ಕೆ, ಮರಳಿ ತರಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದು, ಅಮೂಲ್ಯ ಪರಂಪರೆಯನ್ನು ಪುನಃ ಪ್ರತಿಷ್ಠಾಪಿಸುವಲ್ಲಿ ಯಶಸ್ವಿಯಾಗಿದೆ.*

*ಪ್ರಧಾನಮಂತ್ರಿ ಗತಿಶಕ್ತಿ ಮತ್ತು ಭಾರತ ಮಾಲಾ ಉಪಕ್ರಮಗಳ ಅಡಿಯಲ್ಲಿ, ತೀರ್ಥಯಾತ್ರೆಗಾಗಿ ದೇಶಾದ್ಯಂತ ರೂಪಿಸಲಾದ, ಗುಣಮಟ್ಟದ ರಸ್ತೆಗಳು, ರೋಪ್ ವೇ ಹಾಗೂ ರೈಲು ಸಂಪರ್ಕ, ಅತುಲ್ಯ ಭಾರತದ ಅನುಭೂತಿಯನ್ನು, ಇಂದು ಎಲ್ಲರಿಗೂ ಸಾಧ್ಯವಾಗಿಸಿದೆ.*

*ಕೇಂದ್ರ ಸರ್ಕಾರದ, ಈ ಸಾಂಸ್ಕೃತಿಕ ಪುನರುಜ್ಜೀವನ ಕಾರ್ಯ, ಇತಿಹಾಸವನ್ನು ಸಂರಕ್ಷಿಸುವ ಜೊತೆಗೆ, ನಮ್ಮ ನಂಬಿಕೆಯನ್ನು ಬಲಪಡಿಸಿ, ಮುಂದಿನ ಪೀಳಿಗೆಗೆ ಏಕತೆಯನ್ನು ಪೋಷಿಸುವ ಮನೋಭಾವವನ್ನು ಉದ್ದೀಪಿಸುವ, ಸಂಕಲ್ಪ ಹೊಂದಿದೆ.*

<><><>

ಬಳ್ಳಾರಿ ತಾಲೂಕು, ಕೊಳಗಲ್ಲು ಗ್ರಾಮದ ಜಮೀನು, ಬಳಿಕ ಕುರುಗೋಡು ತಾಲೂಕಿನ ಕೋಳೂರು ಗ್ರಾಮದ ಸೊಸೈಟಿ ಸಭಾಂಗಣದಲ್ಲಿ ವಿಕಸಿತ ಕೃಷಿ ಸಂಕಲ್ಪ ರಾಷ್ಟ್ರೀಯ ಅಭಿಯಾನ ಜರುಗಿತು. ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಕೆ.ಸೋಮಸುಂದರ, ಬೆಂಗಳೂರಿನ ಭಾರತೀಯ ತೋಟಗಾರಿಕಾ ಸಂಶೋಧನಾ ಕೇಂದ್ರದ, ರಾಜು, ಹಗರಿ ಕೃಷಿ ಸಂಶೋಧನಾ ಕೇಂದ್ರದ ವಿಜ್ಞಾನಿ ಎಸ್.ರವಿ ಪಾಲ್ಗೊಂಡು, ರೈತರೊಂದಿಗೆ ಸಮಾಲೋಚಿಸಿದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು

<><><>

ಸಾಮಾಜಿಕ ನ್ಯಾಯದ ಹರಿಕಾರ, ಮಾಜಿ ಮುಖ್ಯಮಂತ್ರಿ, ಡಿ. ದೇವರಾಜ ಅರಸು ಅವರ, 43ನೇ ಪುಣ್ಯತಿಥಿ ಹಿನ್ನೆಲೆ, ಇಂದು ಬೆಳಗ್ಗೆ 10.30ಕ್ಕೆ, ವಿಧಾನಸೌಧದ ಪಶ್ಚಿಮ ದ್ವಾರದ ಬಳಿಯ ಪುತ್ಥಳಿಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಗೌರವ ಸಲ್ಲಿಸಲಿದ್ದಾರೆ.

<><><>

ಶ್ರೇಷ್ಠ ಶಿಕ್ಷಣ ತಜ್ಞ, ಪದ್ಮಭೂಷಣ, ಡಾಕ್ಟರ್ ಎಚ್. ನರಸಿಂಹಯ್ಯ ಅವರ 125ನೇ ಜನ್ಮದಿನ ಇಂದು. ಎಚ್.ಎನ್. ಅವರ ಹುಟ್ಟೂರು, ಕೋಲಾರ ಜಿಲ್ಲೆ, ಗೌರಿಬಿದನೂರು ತಾಲೂಕು, ಹೊಸೂರಿನಲ್ಲಿ ವಿಶೇಷ ಕಾರ್ಯಕ್ರಮ ಏರ್ಪಾಡಾಗಿದೆ.

<><><>

ಕೇಂದ್ರದ 'ಮಾತೃ ವಂದನಾ ಯೋಜನೆ' ತಮ್ಮಂತಹ, ಲಕ್ಷಾಂತರ ತಾಯಂದಿರಿಗೆ, ಆಶಾಕಿರಣ ಎಂದು, ಫಲಾನುಭವಿ, ಮಂಗಳೂರಿನ ಬಬಿತಾ ಮರಕಡ ತಿಳಿಸಿದ್ದಾರೆ.

<><><>

ಮಹಾತ್ಮ ಗಾಂಧಿ ನರೇಗಾ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ, ಆದ್ಯತೆ ನೀಡುವಂತೆ, ರಾಯಚೂರು ಜಿಲ್ಲಾ ಪಂಚಾಯ್ತಿ ಸಿ.ಇ.ಓ. ರಾಹುಲ್ ಪಾಂಡ್ವೆ, ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳಿಗೆ, ಸೂಚಿಸಿದ್ದಾರೆ.

<><><>

ಅಂತಾರಾಷ್ಟ್ರೀಯ ಯೋಗ ದಿನದ ಹಿನ್ನೆಲೆ, ಕೇಂದ್ರ ಆಯು ್ ಸಚಿವಾಲಯ ಆಯೋಜಿಸಲಿರುವ, 21ರ ಯೋಗ ಸಂಗಮ–2025ರಲ್ಲಿ ಭಾಗವಹಿಸಲು, ದೇಶಾದ್ಯಂತ 30 ಸಾವಿರಕ್ಕೂ ಅಧಿಕ ಸಂಘಟನೆಗಳು, ಹೆಸರು ನೋಂದಾಯಿಸಿವೆ.

<><><>

ಬೆಂಗಳೂರಿನ ಕೆ.ಎಸ್.ಆರ್. ರೇಲ್ವೆ ನಿಲ್ದಾಣದಲ್ಲಿ, ಅಂತಾರಾಷ್ಟ್ರೀಯ ಲೆವೆಲ್ ಕ್ರಾಸಿಂಗ್ ಜಾಗೃತಿ ದಿನಾಚರಣೆ ಜರುಗಿತು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಗ್ರಾಮೀಣ ಅರಿವು ಕೇಂದ್ರಗಳ ಡಿಜಿಟಲೀಕರಣ; ಸ್ಪರ್ಧಾತ್ಮಕ ಪರೀಕ್ಷೆ ಆಕಾಂಕ್ಷಿಗಳಿಗೆ, ಆಸರೆ.
- ಉತ್ತರಕನ್ನಡದ ಗುಡ್ಡ ಕುಸಿತದ ಜಾಗೆಗಳಲ್ಲಿ, ಕಟ್ಟೆಚ್ಚರ ವಹಿಸಲು, ಭಾರತೀಯ ಭೂ ಗರ್ಭ ಸರ್ವೇಕ್ಷಣಾ ಸಂಸ್ಥೆ, ಸೂಚನೆ.
- "ಏಕ್ ಪೇಡ್ ಮಾ ಕೆ ನಾಮ್"; ವಿಶ್ವ ಪರಿಸರ ದಿನಾಚರಣೆಯಂದು, ಹಲವೆಡೆ ವೃಕ್ಷಾರೋಪಣ.
- ಕೇಂದ್ರ ಸರ್ಕಾರಕ್ಕೆ 11 ವರ್ಷ ಪೂರ್ಣ; ಹಲವು ಕ್ಷೇತ್ರಗಳಲ್ಲಿ ಗಣನೀಯ ಪರಿವರ್ತನೆಗಳನ್ನು ಸಾಧಿಸುವಲ್ಲಿ, ಯಶಸ್ವಿ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>